**ಓ ಎಸ್ 24/2023 ಪಿಡಬ್ಲ್ಯೂ2**

**ಸಾಕ್ಷಿಯನ್ನು ದಿಃ 17.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಕೆ ಎಂ ಆರ್ ವಕೀಲರಿಂದಃ**

ನಾನು ಡಿಗ್ರಿ ಓದಿದ್ದೇನೆ. ಗೋಪಾಲಸ್ವಾಮಿರವರು ಸುಮಾರು 10 ವರ್ಷಗಳಿಂದ ಪರಿಚಯ. ಗೋಪಾಲಸ್ವಾಮಿರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಾದಿ ಸುನೀತಾರವರು ಸುಮಾರು 10–15 ವರ್ಷಗಳಿಂದ ಪರಿಚಯ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿನ ಸಂಗತಿಗಳನ್ನು ವಕೀಲರು ಬರೆಸಿದ್ದಾರೆ. ಈ ದಾವೆಯನ್ನು ಬನಘಟ್ಟ ಗ್ರಾಮದ ಸರ್ವೆ ನಂ. 43/2–ಪಿ1 ರಲ್ಲಿ 0.10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹೋಗಿದ್ದಾರೆ.

ಕ್ರಯದ ಕರಾರು ದಿನಾಂಕ 24.02.2018 ಹಾಗೂ 19.09.2019 ರಂದು ಆಗಿವೆ. (ಸಾಕ್ಷಿಯು ದಿನಾಂಕಗಳನ್ನು ತನ್ನ ಅಂಗೈ ಮೇಲೆ ಬರೆದುಕೊಂಡು ಅವುಗಳನ್ನು ನೋಡಿ ಹೇಳಿದ್ದಾರೆ.) ಗೋಪಾಲಸ್ವಾಮಿರವರು ವಿದ್ಯಾವಂತರು ಎಂದರೆ ಸರಿ. ದಾವಾ ಆಸ್ತಿಯು ಗೋಪಾಲಸ್ವಾಮಿರವರ ಸ್ವಯಾರ್ಜಿತ. ಕ್ರಯದ ಕರಾರು ಪತ್ರ ಬರೆಯುವಾಗ ನಾನು, ಗೋಪಾಲಸ್ವಾಮಿ, ಸುನೀತಾ, ದೇವೇಗೌಡ ಮತ್ತು ತುಳಸೀರಾಮ್ ಇದ್ದೆವು. ಎರಡೂ ಕ್ರಯದ ಕರಾರು ಪತ್ರಗಳಲ್ಲಿ ಒಕ್ಕಣೆಯನ್ನು ಪತ್ರ ಬರಹಗಾರರಾದ ಸತ್ಯನಾರಾಯಣರವರು ಹೇಳಿದರು. ಗೋಪಾಲಸ್ವಾಮಿರವರಿಗೆ ದಾವಾ ಆಸ್ತಿಯು ಯಾವ ದಿನಾಂಕದ ಕ್ರಯ ಪತ್ರದ ಮೂಲಕ ಬಂದಿತು ಎಂಬ ಅರಿವು ಇತ್ತು ಎಂದರೆ ಸರಿ.ಗೋಪಾಲಸ್ವಾಮಿರವರಿಗೆ ಯಾವ ದಿನಾಂಕದ ಕ್ರಯಪತ್ರದ ಮೂಲಕ ದಾವಾ ಆಸ್ತಿಯು ಬಂದಿತು ಎಂದು ಕ್ರಯದ ಕರಾರು ಪತ್ರಗಳಲ್ಲಿ ನಮೂದು ಆಗಿಲ್ಲ ಎಂದರೆ ಸರಿ, ಸ್ವಯಾರ್ಜಿತ ಎಂದು ನಮೂದು ಆಗಿದೆ. ಕ್ರಯದ ಕರಾರು ಪತ್ರ ಬರೆಯುವಾಗ ಗೋಪಾಲಸ್ವಾಮಿರವರು ಇರದೆ ಇದ್ದ ಕಾರಣ ಕ್ರಯಪತ್ರದ ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಪೂರಕ

ಕ್ರಯದ ಕರಾರು ಪತ್ರದಲ್ಲಿ ರೂ.1,00,000/- ಹಣವನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ಎಂದು ನಿರ್ದಿಷ್ಟವಾಗಿ ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ರೂ.1 ಲಕ್ಷ ಹಣವನ್ನು ಸಾಲಕ್ಕಾಗಿ ತೆಗೆದುಕೊಂಡಿದ್ದರು ಎಂದು ಹೇಳುತ್ತಾರೆ. ಗೋಪಾಲಸ್ವಾಮಿರವರ ಸಮಕ್ಷಮ ಪತ್ರ ವ್ಯವಹಾರ ಆಗದೆ ಇರುವ ಕಾರಣ ರೂ. 1 ಲಕ್ಷ ಹಣವನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಳ್ಳಲಾಗಿದೆಯೋ ಆ ಉದ್ದೇಶವನ್ನು ಬರೆದಿಲ್ಲ ಎಂದರೆ ಸರಿಯಲ್ಲ. ವಾದಿ ಸುನೀತಾರವರ ಕೋರಿಕೆ ಮೇರೆಗೆ ನಾನು ಹೋಗಿದ್ದೆನೆಯೇ ಹೊರತು ಗೋಪಾಲಸ್ವಾಮಿರವರು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನಗೆ ಗೋಪಾಲಸ್ವಾಮಿರವರ ತಂದೆಯ ಹೆಸರಾಗಲೀ ಯಾವುದೇ ವಿಚಾರವಾಗಲಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಗೋಪಾಲಸ್ವಾಮಿರವರು ಸುನೀತಾರವರಿಂದ ಆರ್ ಟಿ ಜಿ ಎಸ್ ಮೂಲಕ ಸಾಲ ಪಡೆದುಕೊಂಡಾಗ ಅದರ ಭದ್ರತೆಗೆ ನಿ ಪಿ 1 ಮತ್ತು 2 ರಲ್ಲಿನ ಖಾಲಿ ಪತ್ರಗಳಿಗೆ ಸಹಿ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಗೋಪಾಲಸ್ವಾಮಿರವರು ಯಾವುದೇ ರೀತಿಯ ನಗದು ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಗೋಪಾಲಸ್ವಾಮಿರವರಿಂದ ಖಾಲಿ ಪತ್ರಗಳಿಗೆ ಸಹಿ ಮಾಡಿಸಿಕೊಂಡಿದ್ದ ಪತ್ರಗಳನ್ನು ದುರುಪಯೋಗಪಡಿಸಿಕೊಂಡು ವಾದಿ ಸುನೀತಾ, ಸಾಕ್ಷಿಗಳು ಮತ್ತು ಪತ್ರ ಬರಹಗಾರರು ಸೇರಿಕೊಂಡು ನಿಶಾನೆ ಪಿ 1 ಮತ್ತು 2 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಮತ್ತು 2 ಸೃಷ್ಟಿತ ದಾಖಲೆಗಳಾಗಿದ್ದ ಕಾರಣ ಗೋಪಾಲಸ್ವಾಮಿರವರು ಬದುಕಿರುವವರೆಗೂ ವಾದಿಯು ಅವರಿಗೆ ಯಾವುದೇ ನೋಟೀಸು ನೀಡಿ ಬೇಡಿಕೆ ಇಟ್ಟಿರಲಿಲ್ಲ ಎಂದರೆ ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಸರಿ ಇರಲಿಲ್ಲವಾದ ಕಾರಣ ಬೇಡಿಕೆ ಇಟ್ಟಿರಲಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದ ಆರ್ ಟಿ ಸಿ ಮತ್ತು ಆಕಾರ್ ಬಂದ್ ಹೋಲಿಕೆ ಆಗುತ್ತಿರಲಿಲ್ಲ, ಮತ್ತು ದುಬಾರೆ ಹಿಸ್ಸೆ ಆಗಿತ್ತು. ಪೂರಕ ಕ್ರಯದ ಕರಾರು ಪತ್ರ ಆದ ದಿನಾಂಕದಿಂದ 3

ವರ್ಷದ ಒಳಗೆ ಆ ರೀತಿಯ ದಾಖಲೆಗಳನ್ನು ಸರಿಪಡಿಸಿಕೊಳ್ಳಿ ಎಂದು ವಾದಿಯು ಗೋಪಾಲಸ್ವಾಮಿರವರಿಗೆ ನೋಟೀಸು ನೀಡಿಲ್ಲ, ಅಷ್ಟರಲ್ಲಿ ಗೋಪಾಲಸ್ವಾಮಿರವರು ತೀರಿಕೊಂಡರು. ಹಾಗೆಯೇ ಗೋಪಾಲಸ್ವಾಮಿರವರ ಹೆಂಡತಿ ಮತ್ತು ಮಕ್ಕಳಿಗೂ ಸಹ ಪೂರಕ ಕ್ರಯದ ಕರಾರು ಪತ್ರದ ದಿನಾಂಕದಿಂದ 3 ವರ್ಷದ ಒಳಗೆ ನೋಟೀಸು ನೀಡಿಲ್ಲ ಎಂದರೆ ಸರಿ. ವಾದಿ ಸುನೀತಾ, ನಾನು, ಪತ್ರ ಬರಹಗಾರ ಮತ್ತು ಸಾಕ್ಷಿಗಳು ಸೇರಿಕೊಂಡು ನಿಶಾನೆ ಪಿ 1 ಮತ್ತು 2 ನ್ನು ಸೃಷ್ಟಿ ಮಾಡಿರುವ ಕಾರಣ ಅವರಿಗೆ ಯಾವುದೇ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ನಾನು ವಾದಿ ಸುನೀತಾರವರ ಆಪ್ತರಾಗಿರುವ ಕಾರಣ ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ಲಪಟಾಯಿಸಬೇಕು ಎಂಬ ಸುನೀತಾರವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**